


**ಕೌತುಕಗಳ ಅನಾವರಣ**

'ಅರ್ಧಯಂತ್ರೇಶ್ವರ', ರಘುನಾಥ ಚ.ಹ. ಅವರ ಮುಖಪುಟ ಲೇಖನ (ಸುಧಾ, ಡಿ. 3) ಮಾನವನ ಆವಿಷ್ಕಾರಗಳು ಹಾಗೂ ತಾಂತ್ರಿಕತೆಯ ಬಳಕೆಯನ್ನು ಕುರಿತು ಹಲವಾರು ಕೌತುಕಗಳನ್ನು ಅನಾವರಣಗೊಳಿಸಿದೆ. ಬರೀ ಸಿನಿಮಾಗಳಲ್ಲಿ ತೋರಿಸುವ ಕಲ್ಪನಾ ಕಥೆಗಳು ನಿಜವಾಗುವ ದಿನಗಳು ದೂರವಿಲ್ಲ ಎನಿಸುತ್ತದೆ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಬಿ.ಎಸ್. ಸತೀಶ್, ಮೈಸೂರು, ಎಚ್.ಆರ್.ದೇಸಾಯಿ, ರಾಯಚೂರು, ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

**ಸಾಂಸಾರಿಕ ಜೀವನ ಧ್ವಂಸ**

ಸೃಷ್ಟಿ ನಿಯಮಕ್ಕೆ ವಿರುದ್ಧವಾದ ಎಲೆಕ್ಟ್ರಾನಿಕ್ ತಂತ್ರಜ್ಞಾನದ ನೂತನ ಪೀಡೆ ಬೆಡ್‌ರೂಮಿನೊಳಗೂ ನುಸುಳುವುದನ್ನು ಲೇಖಕರು ತಿಳಿಸಿದ್ದಾರೆ. ಹೆಣ್ಣು ಸಂತತಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಆವಿಷ್ಕಾರ ಸಾಂಸಾರಿಕ ಜೀವನ ಧ್ವಂಸ ಮಾಡಬಲ್ಲದು.

–ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

**ಸಾಧ್ಯವಿಲ್ಲ**

ರೋಬೋಗಳು ಏನೇ ಆದರೂ ಮನುಷ್ಯರಂತೆ ಆಗಲು ಸಾಧ್ಯವಿಲ್ಲ. ಡಿ.ವಿ.ಜಿ. ಅವರು ಹೇಳಿದಂತೆ 'ಅತಿ ಬೇಡವೆಲ್ಲಿಯೂ ಮಂಕುತಿಮ್ಮ' ಎಂಬುದನ್ನು ನೆನಪಿಸಿಕೊಳ್ಳುವುದು ಉತ್ತಮ.

–ಸು.ವಿಜಯಲಕ್ಷ್ಮಿ, ಶಿವಮೊಗ್ಗ

**ಅತಿಯಾದ ಉತ್ಪ್ರೇಕ್ಷೆ**

'ಬೆಳ್ಳಿತೆರೆ ಬೊಂಬೆಯಾಟ (ಮಹತಿ) ಲೇಖನದಲ್ಲಿ ತಮಿಳು ಮತ್ತು ಇತರ ಸಿನಿಮಾಗಳ ಬಗ್ಗೆ ಅತಿಯಾದ ಉತ್ಪ್ರೇಕ್ಷೆ ಇದೆ. ಕೊನೆಯಲ್ಲಿ ಕನ್ನಡ ಸಿನಿಮಾ ಮತ್ತು ನಟರ ಬಗ್ಗೆ ತಿಳಿಸಲಾಗಿದೆ.

– ಎಸ್.ಎಂ. ರಾಘವೇಂದ್ರ, ಬೆಂಗಳೂರು

**ಸಂದರ್ಶನ ಸೊಗಸಾಗಿದೆ**

ಬಂದ್ರು ಸಾರ್.. (ಬಿ.ಎಂ. ಹನೀಫ್) ಹಂಸಲೇಖ ಅವರ ಬಗೆಗಿನ ಸಂದರ್ಶನ ಬಹಳ ಚೆನ್ನಾಗಿದೆ. ಲೇಖನದಲ್ಲಿ ಹಂಸಲೇಖ ಅವರ ಪತ್ನಿ, ಗಾಯಕಿ ಲತಾ ಅವರನ್ನೂ ಸ್ಮರಿಸಬೇಕಾಗಿತ್ತು.

–ಮುಕುಂದ ಹೆರಕಲ್ಲ, ಕಲಬುರಗಿ, ಪ್ರದೀಪ್ ಎನ್. ಚೆಲುವರಸನಕೊಪ್ಪಲು, ಎಂ. ಮೃತ್ಯುಂಜಯಪ್ಪ, ಎಚ್. ಆನಂದಕುಮಾರ್, ಚಿತ್ರದುರ್ಗ, ವಿಜಯಾ ರಮೇಶ್, ಬೆಳ್ಳಾವೆ ರಮೇಶ್, ಉಡುಪಿ, ರವೀಂದ್ರನಾಥ ಶಿ. ಯಡಹಳ್ಳಿ, ರಾಜಕುಮಾರ್, ಬೆಂಗಳೂರು, ಚಿತ್ರಾವತಿ ತುಮಕೂರು, ವಿದ್ಯಾಲಕ್ಷ್ಮಿ ಹಾಸನ

**ಅರ್ಥಪೂರ್ಣ ಶೀರ್ಷಿಕೆ**

ಹಂಸಲೇಖ ಅವರ ಸಂದರ್ಶನ ಚೆನ್ನಾಗಿದೆ. ಶೀರ್ಷಿಕೆ ಕೂಡ ಅರ್ಥಪೂರ್ಣ.

–ರವಿರಾಜ ಬೈಕಂಪಾಡಿ

**ನಯನ ಮನೋಹರ**

'ಅವಿಸ್ಮರಣೀಯ ಥಾಯ್ಲೆಂಡ್' (ಕ್ಯಾಪ್ಟನ್ ಬಿ.ಎಸ್. ಸುದರ್ಶನ್) ಪ್ರವಾಸ ಲೇಖನ ನಯನ ಮನೋಹರ.

–ಆರ್.ಲತಾಗೌಡ, ಬೇವಿನಹಳ್ಳಿ, ಎಸ್. ಚನ್ನಪ್ಪ, ಮೈಸೂರು

**ಗ್ರ್ಯಾಂಡ್ ಮಸೀದಿ**

ಅಬುದಾಭಿಯ ಗ್ರ್ಯಾಂಡ್ ಮಸೀದಿ (ಪ್ರಭಾ ಎಂ.ವೈ.) ಚಿತ್ರ ಲೇಖನ ಅದ್ಭುತ.

–ಮಲ್ಲನಗೌಡ ಪಾಟೀಲ ರಾಮದುರ್ಗ

**ನಿಯಮವೆಲ್ಲಿದೆ?**

ಮಸೀದಿ ಲೇಖನದ ಕೊನೆಗೆ ಮಹಿಳೆಯರು ಬುರ್ಖಾ ಅಥವಾ ಬಟ್ಟೆ ತಲೆ ಮೇಲೆ ಹಾಕಿಕೊಂಡಿರಬೇಕು ಎಂದಿದೆ. ಆದರೆ ಚಿತ್ರದಲ್ಲಿ ಇಬ್ಬರು ಮಹಿಳೆಯರು ಬಟ್ಟೆ ಅಥವಾ ಬುರ್ಖಾ ಹಾಕಿಕೊಂಡಿಲ್ಲವಲ್ಲಾ..?

–ಎಚ್.ಆರ್. ದೇಸಾಯಿ, ರಾಯಚೂರು

**ಗೊಂದಲ ಕಥೆ**

ಪಾರಿಜಾತ ಕಥೆ (ಡಾ. ಗೀತಾ ಸೀತಾರಾಮ್) ಚೆನ್ನಾಗಿದೆ. ಆದರೆ ಕೊನೆ ಕೊನೆಗೆ ಭಯಾನಕ ಎನಿಸಿತು. ಜತೆಗೆ ಅಂತ್ಯ ಗೊಂದಲಮಯವಾಗಿದೆ.

–ರಾಜಶೇಖರ ಹಾದಿಮನಿ, ಧಾರವಾಡ, ಕುಸುಮ ಬೆಜ್ಜವಳ್ಳಿ, ಶರ್ಮಿಳ ಮಂಜುನಾಥ, ತೀರ್ಥಹಳ್ಳಿ, ಕೊಹಿಮ ಬಸರಕೋಡು, ಎಸ್. ವಿಜಯಕುಮಾರಿ, ಬೆಂಗಳೂರು

**ವಿಶ್ಲೇಷಣಾತ್ಮಕ**

'ನಿಮ್ಮೊಡನೆ'ಯಲ್ಲಿ 'ಕನಸನ್ನು ಕರಗಿಸುವ ಕಷ್ಟ' (ಎನ್. ಉದಯಕುಮಾರ್) ಬರಹ ವಿಶ್ಲೇಷಣಾತ್ಮಕವಾಗಿದೆ.

–ಎಸ್. ಸುಂದರ್, ಬೆಂಗಳೂರು, ಮಹಾವೀರ ಕಾಸರ, ಶಿವಮೊಗ್ಗ



ಕೂದಲು ಉದುರುತ್ತಿದೆಯೇ?
ಚಿಂತಿಸಬೇಕಾದ ಅಗತ್ಯವಿಲ್ಲ..




ಬೈದ್ಯನಾಥ್
ಮಹಾಭೃಂಗರಾಜ್
ತೈಲ
14 ಗಿಡಮೂಲಿಕೆಗಳ
ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದ್ದು
ಇದು ಒಳಗಿನಿಂದಲೇ
ನೆತ್ತಿಯನ್ನು ತಲುಪಿ
ಕೂದಲ ಬೇರುಗಳನ್ನು
ಸದೃಢಗೊಳಿಸುವುದು.
ರಾಸಾಯನಿಕಗಳಿಲ್ಲ!
ಕೃತಕ ಸುವಾಸನೆಯಿಲ್ಲ!
ಪರಿಶುದ್ಧ ಭೃಂಗರಾಜ್ ಮಾತ್ರ!!
Doctor's consultation at Baidyanath Clinic, Nagpur (0712) 2551553/2440020